ಹೆಣ್ಣಿನ ದೈಹಿಕ ಮಿಲನದ ತೃಪ್ತಿಯಲ್ಲವೆ? ಅಂತಹ ಸುಖವೇ ಇಲ್ಲದೆ ನನ್ನ ಜೀವ ಅದೆಷ್ಟು ನೊಂದಿದೆ ಎಂದು ನಿಮಗೆ ಊಹಿಸಲು ಸಾಧ್ಯವೆ? ನಾನು ಕಣ್ಣೀರು ಹರಿಸದೆ ಮಲಗಿದ ದಿನವೇ ಇಲ್ಲ ಎಂದರೆ ನಂಬುತ್ತೀರಾ?' ಎಂದಳು.

ಅವಳ ಸಂಕಟ ನಿಧಾನಕ್ಕೆ ಅರ್ಥವಾಗತೊಡಗಿತು. ಗಂಡನಿಗಿಂತಲೂ ಇವಳ ಸಂಕಟ ದೊಡ್ಡದು ಎಂದು ನನಗೆ ತಿಳಿಯಲಾರಂಭಿಸಿತು. ಅವನಿಗಾದರೋ ಮಾಡಿದ ತಪ್ಪಿಗೆ ಶಿಕ್ಷೆ ಅನುಭವಿಸುವಂತೆ ನೋವನ್ನು ಸಹಿಸುವ ನಿಮಿತ್ತವಿದೆ. ಆದರೆ ಈ ಹುಸಿಮದುವೆಯಲ್ಲಿ ಅವಳದೇನೂ ತಪ್ಪಿಲ್ಲ. ಎಲ್ಲ ಹುಡುಗಿಯರಂತೆ ಸಾಕಷ್ಟು ಕನಸುಗಳನ್ನು ಕಂಡು ಅವನನ್ನು ವರಿಸಿದ್ದಾಳೆ. ಇಸ್ಪೀಟಿನ ಗೋಪುರ ಉರುಳಿದಂತೆ ಬದುಕು ಕುಸಿದುಹೋಗಿದ್ದರೂ, ಯಾರ ಮುಂದೆಯೂ ಹೇಳಿಕೊಳ್ಳಲಾರಳು. ಯಶಸ್ವಿ ದಾಂಪತ್ಯದ ಪುರಾವೆಯೆಂಬಂತೆ ಅವರ ಮಗುವೊಂದು ಬೆಳೆಯುತ್ತಿರುವುದನ್ನು ನೋಡುವ ಭಾರತೀಯರು ಯಾರೂ ಅವಳ ಸಂಕಟವನ್ನು ಅರ್ಥ ಮಾಡಿಕೊಂಡು, ಅವಳ ಗಂಡನ ಪುರುಷತ್ವವನ್ನು ಸಂಶಯಿಸಲು ಸಾಧ್ಯವಿಲ್ಲ. ಅದೇನಿದ್ದರೂ ಅವಳದೇ ತಪ್ಪಿರಬೇಕು ಎನ್ನುತ್ತಾರೆ.

'ಅವನೂ ಸಾಕಷ್ಟು ದುಃಖಪಟ್ಟಿದ್ದಾನೆ. ಮದುವೆಯಾದಂದಿನಿಂದ ಈವರೆಗೂ ಬೇರೊಬ್ಬ ಗಂಡಸಿನ ಜೊತೆ ಬೆರೆತಿಲ್ಲವೆಂದು ಹೇಳಿದ' ಎಂದೆ. ಆ ಸಂಗತಿಯ ಕುರಿತು ಅವಳ ಅಭಿಪ್ರಾಯ ತಿಳಿಯುವುದು ನನಗೆ ಮುಖ್ಯವಾಗಿತ್ತು.

ಹೌದೆಂದು ಆಕೆ ತಲೆ ಆಡಿಸಿದಳು. 'ಅವನು ಆ ಧೈರ್ಯವನ್ನು ಕಳೆದುಕೊಂಡುಬಿಟ್ಟಿದ್ದಾನೆ. ಅವನ ಮೇಲಿನ ಕಹಿ ಕಡಿಮೆಯಾದ ಮೇಲೆ ಅವನ ಸಂಕಟ ನನಗೂ ಅರ್ಥವಾಗತೊಡಗಿತು. ಹೊರಗಡೆ ಯಾರನ್ನಾದರೂ ಹುಡುಕಿಕೋ ಎಂದು ಸಾಕಷ್ಟು ಸಲ ಹೇಳಿದೆ. ಅವನಿಗೆ ಅಂತಹ ಧೈರ್ಯವಿಲ್ಲ. ಅವನ ಪಾಪಪ್ರಜ್ಞೆ ಅವನ ಆತ್ಮಸ್ಥೈರ್ಯವನ್ನು ನುಂಗಿ ಹಾಕಿಬಿಟ್ಟಿದೆ. ಮತ್ತೊಬ್ಬ ಗಂಡಿನ ಆಸೆ ಮನಸ್ಸಿನಲ್ಲಿದ್ದರೂ ಮುಖಾಮುಖಿಯಾಗಲು ನಡುಗುತ್ತಾನೆ. ನಾನೇ ಯಾರನ್ನಾದರೂ ಹುಡುಕಿಕೊಟ್ಟರೂ ಸುಖವನ್ನು ಅನುಭವಿಸುವ ದಾಢಸಿತನ ಅವನಿಗಿಲ್ಲ. ಲಜ್ಜೆ ಮತ್ತು ಭಯವನ್ನು ಕಳೆದುಕೊಳ್ಳದೆ ಎಂದೂ ಕಾಮತೃಷೆ ತೀರಿಸಿಕೊಳ್ಳಲು ಸಾಧ್ಯವಿಲ್ಲ' ಎಂದಳು.

'ನಿಮ್ಮದೂ ಅದೇ ಸ್ಥಿತಿಯಲ್ಲವೆ? ಹೇಗೆ ಬದುಕನ್ನು ನಿಭಾಯಿಸಿದಿರಿ?' ಎಂದು ಸೂಕ್ಷ್ಮವಾಗಿ ಕೇಳಿದೆ.

'ನಾನು ಬೇರೆಯವರ ಜೊತೆ ಆಗಾಗ ಬೆರೆತಿದ್ದೇನೆ. ಹಾಗೆ ಸಂಪೂರ್ಣವಾಗಿ ದೇಹದ ಬಯಕೆ ಪೂರೈಸದೇ ಶುಷ್ಕವಾಗಿ ಬದುಕುವ ಅವನ ಕಾಠಿಣ್ಯತೆ ನನಗಿಲ್ಲ' ಎಂದಳು. ನಾನು ಉಗುಳು ನುಂಗಿದೆ.

'ಈ ಸಂಗತಿ ಅವನಿಗೆ ತಿಳಿದಿದೆಯೆ?' ಎಂದೆ. ಅವಳು ವಿಷಾದದಿಂದ ನಕ್ಕಳು.

'ನಮ್ಮಿಬ್ಬರ ಮಧ್ಯೆ ಯಾವ ರಹಸ್ಯಗಳೂ ಇಲ್ಲ. ಎಲ್ಲವನ್ನೂ ಒಬ್ಬರಿಗೊಬ್ಬರು ಹೇಳಿಕೊಳ್ಳುವಂತಹ ಗೆಳೆಯರಾಗಿದ್ದೇವೆ. ನನಗೆ ಡೇಟಿಂಗ್ ಮಾಡಲು ಹುರಿದುಂಬಿಸಿದವನೂ ಅವನೇ. ಮೊಬೈಲ್‌ನಲ್ಲಿ ಡೇಟಿಂಗ್ ಆಪ್ ಹಾಕಿಕೊಟ್ಟವನೂ ಅವನೇ. ಅಷ್ಟೇ ಅಲ್ಲ, ನನಗಾಗಿ ಎಷ್ಟೋ ಗಂಡಸರ ಮನವೊಪ್ಪಿಸಿ ಮನೆಗೆ ಕರೆದುಕೊಂಡು ಬಂದಿದ್ದಾನೆ. ಆ ಹೊತ್ತಿನಲ್ಲಿ ಮನೆಯಲ್ಲಿ ತಾನು ಮತ್ತು ಮಗಳು ಇರಬಾರದೆಂದು ಅವಳನ್ನು ಎತ್ತಿಕೊಂಡು ಪಾರ್ಕಿಗೆ ಹೋಗಿಬಿಡುತ್ತಾನೆ. ಈಗಂತೂ ಇಂತಹ ಹಾದರವೆಂದರೆ ವಾಕರಿಕೆ ಬರುವಂತಾಗಿದೆ. ಆಗಲೇ ಹೇಳಿದೆನಲ್ಲ, ಅವನಷ್ಟು ಒಳ್ಳೆಯವರು ಬದುಕಿನಲ್ಲಿ ಸಿಗುವುದು ಕಷ್ಟ.'

ಈ ಸಂಕೀರ್ಣತೆಯನ್ನು ಜೀರ್ಣಿಸಿಕೊಳ್ಳಲು ನನಗೆ ಕಷ್ಟವಾಗತೊಡಗಿತು.

'ಹಾಗಿದ್ದರೆ ಬಿಡುಗಡೆಯ ಪ್ರಸ್ತಾಪವೇಕೆ?' ಎಂದೆ. ಅದು ಅವಳನ್ನು ಕೆಣಕಿತು. ಅವಳ ಮಾತು ತುಸು ದೊಡ್ಡ ಧ್ವನಿಯಲ್ಲಿ ಹೊರಡತೊಡಗಿತು. ದೃಷ್ಟಿ ತೆಗೆದು ಕೆಂಡದ ಮೇಲೆ ಹಾಕಿದ ಉಪ್ಪು-ಮೆಣಸಿನಕಾಯಿಯು ಚಟಚಟನೆ ಸಿಡಿದು ಹೊಗೆಯನ್ನು ಹಬ್ಬಿಸುವಂತೆ ಅವಳು ತನ್ನ ಸಂಕಟವನ್ನು ಹೊರ ಹಾಕತೊಡಗಿದಳು.

'ಹೆಣ್ಣು ತನ್ನ ಅನ್ಯಾಯಕ್ಕೆ ಹೋರಾಡಬಾರದೆ? ಅಸಹಾಯಕತೆಯಿಂದ ಆಗೊಮ್ಮೆ ಈಗೊಮ್ಮೆ ಮಾಡುವ ಹಾದರ ನನ್ನ ಬದುಕಿಗಾದ ಘೋರ ಅನ್ಯಾಯಕ್ಕೆ ಪರಿಹಾರವಾಗಲು ಸಾಧ್ಯವೆ? ವಯಸ್ಸಿನಲ್ಲಿ ನಾನು ದೃಷ್ಟಿಯಾಗುವಷ್ಟು ಅಂದದ ಹುಡುಗಿಯಾಗಿದ್ದೆ. ಯಾವ ಗಂಡಸಾದರೂ ಆಸೆಯಿಂದ ಕೈಹಿಡಿದು ಕರೆದುಕೊಂಡು